ಶ್ರೀ ವಾಟಾಳ್ ನಾಗರಾಜ್ : ಸರ್ ತಮ್ಮ ಉತ್ತರ ನಿಜಕ್ಕೂ ನಮಗೆ ಸಮಾಧಾನ ತಂದಿಲ್ಲ, ಪ್ರಾಮಾಣಿಕವಾಗಿ ಹೇಳುವುದಾದರೆ ನಿಮ್ಮ ಉತ್ತರದಿಂದ ನಮಗೆ ಸಮಾಧಾನವಿಲ್ಲ. ನಿಮ್ಮ ಉತ್ತರದಿಂದ ನಮಗೆ ಬೇಸರವಾಗಿದ್ದು ನಾನು ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರಗೆ ನಡೆದರು)

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ನವೋದಯ ಶಾಲೆಯಲ್ಲಿ ಒಂದು ಹೆಣ್ಣುಮಗಳು ಸತ್ತು ಈಗಾಗಲೇ 15 ದಿವಸಗಳಾಗಿವೆ..... ತುಮಕೂರು ತುಂಬಾ ದೊಡ್ಡ ಗಲಾಟೆಯಾಗಿದೆ.

ಅಧ್ಯಕ್ಷರು : ನಿಮಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಆಯಿತು. ಈಗ ಆಫ್ಟರ್ ಸಮ್ಮರಿ ಎನ್ಕೈರಿ ಅವರನ್ನು ಡಿಸ್ಮಿಸ್ ಮಾಡಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಅಲ್ಕೋಡ್ ಹನುಮಂತಪ್ಪ : ಮುಖ್ಯೋಪಾಧ್ಯಾಯರನ್ನು ಬಂಧನ ಮಾಡಿ ಎಂದು ಪತ್ರಿಕೆಯಲ್ಲಿ .....

ಶ್ರೀ ಜೆ. ಸಿ. ಮಾಧುಸ್ವಾಮಿ : ಹೆಣ್ಣುಮಕ್ಕಳು ಸಾಯುತ್ತಿದ್ದರೆ ಪತ್ರಿಕೆಯಲ್ಲಿ ಬರಬೇಕೆಂದು ಹೇಳುತ್ತೀರಿ, ಯಾರಿಗೆ ಮಾತನಾಡುತ್ತಿದ್ದೀರಿ, ಹೆಣ್ಣುಮಕ್ಕಳು ಸಾಯುತ್ತಿದ್ದರೆ ಪತ್ರಿಕೆಯಲ್ಲಿ ಬರಬೇಕೆನ್ನುವುದನ್ನು ನಿಮಗೆ ಇಟ್ಟುಕೊಳ್ಳಿರಿ.

ಅಧ್ಯಕ್ಷರು : ನೀವು ನೀವೇ ಏತಕ್ಕೆ ಮಾತನಾಡುತ್ತಿದ್ದೀರಿ ?

ಶ್ರೀ ಅಲ್ಕೋಡ್ ಹನುಮಂತಪ್ಪ : ಸರ್ ಮುಖ್ಯಮಂತ್ರಿಗಳು ಏನು ಹೇಳಿದರು. ಉತ್ತರವನ್ನು ಸದನಕ್ಕೆ ಒದಗಿಸುವುದಾಗಿ ತಿಳಿಸಿದ್ದಾರೆ, ಅದಕ್ಕಾಗಿ ಏತಕ್ಕೆ ಹೊರಗೆ ಹೋಗಬೇಕು?

ಶ್ರೀ ಜೆ. ಸಿ. ಮಾಧುಸ್ವಾಮಿ : ನವೋದಯ ಶಾಲೆಯಲ್ಲಿ ನಡೆದಿರುವ ಪ್ರಕರಣದ ಮೇಲೆ ಅದೇ ರೀತಿ ಕ್ರಮ ತೆಗೆದುಕೊಳ್ಳಿ ಎಂದು ನಾನು ಮುಖ್ಯಮಂತ್ರಿಯವರಲ್ಲಿ ಕೇಳಲಿಕ್ಕೆ ನನಗೆ ಹಕ್ಕಿಲ್ಲವೇ behave yourself ನೀವ್ಯಾರೀ ಉತ್ತರ ಹೇಳಲಿಕ್ಕೆ? ಏನು ಮಾತನಾಡುತ್ತಿದ್ದೀರಿ ನೀವು; ಮಂತ್ರಿಯಾಗಿ ನೀವು you must behave resposibly. xx ಸರ್ ಇದು ಪ್ರಿವಿಲೇಜ್ ಆಗುತ್ತದೆ.

(ಗೊಂದಲ)

(ಈ ಹಂತದಲ್ಲಿ ಹಲವಾರು ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.